# ಜೀವ ಜಲಕ್ಕೆ ಕುತ್ತು ಕಾದಿದೆ ಆಪತ್ತು



**ಬಿಬಿಸಿ ಸಂಸ್ಥೆಯವರು ಪ್ರಕಟಿಸಿದ ಸಮೀಕ್ಷೆಯ ಪ್ರಕಾರ ವಿಶ್ವದ 11 ನಗರಗಳಲ್ಲಿ ನೀರಿನ ಹಾಹಾಕಾರ ಶೀಘ್ರವೇ ಭೀಕರ ಸ್ವರೂಪ ತಾಳಲಿದೆ. ಈ ಪಟ್ಟಿಯಲ್ಲಿ ಮೊದಲ ಸ್ಥಾನ ದಕ್ಷಿಣ ಆಫ್ರಿಕಾದ ಕೇಪ್‌ಟೌನ್ ನದ್ದು, ಎರಡನೆಯ ಸ್ಥಾನ ನಮ್ಮ ಬೆಂಗಳೂರಿನದ್ದು! ಜಲಕ್ಷಾಮವನ್ನು ಎದುರಿಸಲು ಜನರು ಏನು ಮಾಡಬೇಕು?**

**★ ಡಾ.ಎಂ. ಶಾಲಿನಿ**

'ಅಜ್ಜಿ, ಇಷ್ಟೇ ಇಷ್ಟು ನೀರು ಕೊಟ್ಟಿದ್ದೀಯಾ, ಇನ್ನೊಂಚೂರು ಕೊಡಜ್ಜಿ, ಸುಸ್ತಾಗ್ತಾ ಇದೆ. ಪ್ಲೀಸ್ ಅಜ್ಜಿ, ಇನ್ನೊಂದು ಲೋಟ ಕೊಡಜ್ಜಿ' ಮೊಮ್ಮಗಳು ಅಂಗಲಾಚಿದಾಗ, ಇಲ್ಲದ ನೀರನ್ನು ಎಲ್ಲಿಂದ ತರಲಿ. ಅಕ್ಕಪಕ್ಕದವರ ಮನೆಯಲ್ಲಿ ನೀರು ಕೇಳೋಣ ಎಂದು ಹೊರಬಂದೆ. ಸಾವಿಲ್ಲದ ಮನೆಯಲ್ಲಿ ಸಾಸಿವೆ ಕಾಳು ಹುಡುಕಿದ ಹಾಗಾಯಿತು ನನ್ನ ಪಾಡು. ಎಲ್ಲೂ ಒಂದು ಚೊಂಬು ನೀರು ಸಿಗದಿದ್ದಾಗ, ಹತಾಶೆ ಕೋಪ ಎಲ್ಲವೂ ಒಟ್ಟಿಗೆ ಬಂದು, ಅಸಹಾಯಕಳಾಗಿ ಕುಸಿದು ಕುಳಿತೆ.

'ಅಯ್ಯೋ ವಿಧಿಯೇ ಈ ದಿನ ನೋಡಲು ನನ್ನನ್ನು ಬದುಕಿಸಿದ್ದೀಯಾ' ಎಂದು ಶಪಿಸಿದೆ. ಒಮ್ಮೆಲೆ ಮೈಯಲ್ಲಾ ಬೆವತೆಂತಾಗಿ ಥಟ್ಟನೇ ಎಚ್ಚರವಾಯಿತು. 'ಅಯ್ಯೋ ಇದು ಕನಸೆ' ಎಂದು ಎದ್ದುಕೂತೆ. ಸ್ವಲ್ಪ ಸಮಾಧಾನವಾಯಿತು. 'ದೇವರೇ, ಇದು ಕನಸಾಗೇ ಇರಲಪ್ಪಾ' ಎಂದು ಬೇಡಿಕೊಂಡೆ. ಆದರೆ ಒಳ ಮನಸ್ಸು ಚುಚ್ಚುತ್ತಾ ಇತ್ತು. ಇವತ್ತಿನ ಪರಿಸ್ಥಿತಿ ಹೀಗೆ ಮುಂದುವರಿದರೆ ನನ್ನ ಕನಸು ನನಸಾಗುವ ಕಾಲ ದೂರ ಉಳಿದಿಲ್ಲವೆಂದು!

ಬಿಬಿಸಿ ಸಂಸ್ಥೆಯವರು ಪ್ರಕಟಿಸಿದ ಸಮಿಕ್ಷೆಯ ಪ್ರಕಾರ ವಿಶ್ವದ 11 ನಗರಗಳಲ್ಲಿ ಇನ್ನು ಸ್ವಲ್ಪವೇ ವರ್ಷಗಳಲ್ಲಿ ಜಲಕ್ಷಾಮ ಎದುರಿಸುವಲ್ಲಿ ಬೆಂಗಳೂರಿಗೆ ಎರಡನೇ ಸ್ಥಾನ ! ಮೊದಲ ಸ್ಥಾನ ಬ್ರೆಜಿಲ್‌ನ ಸಾವೊ ಪಾಮ್ಲೊ.

ಇದಕ್ಕೆ ಕಾರಣವಾದರೂ ಏನು? ನಾವು ಹೇಗೆ ಇದಕ್ಕೆ ಜವಾಬುದಾರರು!

ನಮ್ಮ ಬೆಂಗಳೂರು ಈಗ ಚಿಕ್ಕದಾದ, ಚೊಕ್ಕವಾದ ಪ್ರೀತಿಯ ಪುಟ್ಟ ನಗರವಾಗಿ ಉಳಿದಿಲ್ಲ. 50 ವರ್ಷಗಳ ಹಿಂದೆ ನಗರದ ಸುತ್ತಮುತ್ತ ಇದ್ದ ಹಳ್ಳಿಗಳೆಲ್ಲ ಇಂದು ಬೆಂಗಳೂರಿಗೆ ಸೇರಿಬಿಟ್ಟಿವೆ. ಬೆಂಗಳೂರಿನ ಜನಸಂಖ್ಯೆ ಒಂದು ಕೋಟಿಗೂ ಮೀರಿ ನಿಂತಿದೆ. ಅಭಿವೃದ್ಧಿಯ ಹೆಸರಲ್ಲಿ ಎರ್ರಾಬಿರ್ರಿಯಾಗಿ ಬೆಳೆದಿದೆ. ನಗರ ಬೆಳೆದಂತೆ ಮೂಲ ಸೌಕರ್ಯಗಳನ್ನು ಒದಗಿಸುವುದು ಒಂದು ಸವಾಲೆ ಸರಿ. ಜನಸಂಖ್ಯೆ ಬೆಳೆದಂತೆ, ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯಗಳು ಕಟ್ಟಿಟ್ಟ ಬುತ್ತಿ!

ಬೆಂಗಳೂರಿನ ಶೇ. 70 ರಷ್ಟು ಕಾವೇರಿ ನೀರಿಗೆ ಅವಲಂಬಿತರು. ಆಕೆ ಎಷ್ಟು ಜನರ ದಾಹ ತಣಿಸ್ಯಾಳು? ಬೆಂಗಳೂರಿಗರಿಗೆ ಜಲಕ್ಷಾಮದ ಭೀತಿ ಏಕೆ ಎನ್ನುವ ಪ್ರಶ್ನೆಗೆ ಈ ಕೆಳಗಿನ ಕಾರಣಗಳನ್ನು ಪಟ್ಟಿ ಮಾಡಬಹುದು.

★ ಹೆಚ್ಚುತ್ತಿರುವ ಜನಸಂಖ್ಯೆ
★ ಸರಿಯಿಲ್ಲದಿರುವ ಜಲಮೂಲಗಳ ನಿರ್ವಹಣೆ
★ ಪೋಲಾಗುತ್ತಿರುವ ನೀರಿನ ಪ್ರಮಾಣ
★ ಸಮರ್ಪಕವಾಗಿರದ ಮಳೆನೀರು ಕೊಯ್ಲು
★ ಎಗ್ಗಿಲ್ಲದೆ ತೋಡುತ್ತಿರುವ ಕೊಳವೆ ಬಾವಿಗಳು
★ ಮಲಿನಗೊಂಡಿರುವ ಕೆರೆ, ನದಿ ಮೂಲಗಳು
★ ಶೇ. 85 ಕೆರೆ ನೀರು ಬಳಸಲು ಯೋಗ್ಯವಲ್ಲದಿರುವುದು
★ ಮನೆಕಟ್ಟಲು ಇತರೆ ಕೆಲಸಗಳಿಗೆ, ಕುಡಿಯುವ ನೀರನ್ನು ಬಳಸುವುದು
★ ಕೈಗಾರಿಕಾ ತ್ಯಾಜ್ಯಗಳನ್ನು ಶುದ್ಧನೀರಿನ ಮೂಲಕ ಬಿಡುವುದು
★ ನಾಳಿನ ಅರಿವಿಲ್ಲದೆ ಯಥೇಚ್ಛವಾಗಿ ನೀರನ್ನು ಪೋಲು ಮಾಡುವುದು.

ಸಾಕೆ!! ಇನ್ನೆಷ್ಟು ಕಾರಣಗಳು ಬೇಕು, ಕಂಗೆಟ್ಟ ನಾಳೆಗಳನ್ನು ನೋಡಲು, ಭೂಮಿತಾಯಿ, ಕಾವೇರಿ ತಾಯಿಯನ್ನು ಮಲಿನಗೊಳಿಸಲು!

ಈಗಿನ ಅಂದಾಜಿನ ಪ್ರಕಾರ ಬೆಂಗಳೂರಿನ ಜನಸಂಖ್ಯೆ ಬರೋಬರಿ 1.23 ಕೋಟಿ. ವಿಶ್ವದಲ್ಲೇ ಅತಿ ಹೆಚ್ಚು ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದು. ಇದು ನಮಗೆ ಎಚ್ಚರಿಕೆ ಗಂಟೆಯಾಗಬೇಕು.